# ಜೊಲ್ಲೆ ಗ್ರೂಪ್

ವಾರ್ತಾ ಪತ್ರ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಸೆಪ್ಟೆಂಬರ 2023–ಸಂಪುಟ–7 ಸಂಚಿಕೆ–10

# ದರ್ಪಣ




ವಿಶ್ವಪ್ರಸಿದ್ಧ ಪುಣ್ಯಕ್ಷೇತ್ರ ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಶ್ರೀ ಕಾಶಿ ವಿಶ್ವನಾಥ ದೇವಾಲಯಕ್ಕೆ ಶ್ರೀ ಬಸವಪ್ರಸಾದ ಅವರ ಹುಟ್ಟು ಹಬ್ಬದ ನಿಮಿತ್ಯ ಭೇಟಿ ನೀಡಿ, ಜೊಲ್ಲೆ ಕುಟುಂಬ ದೇವರ ದರ್ಶನ ಪಡೆದುಕೊಂಡ ದೃಶ್ಯ.


## ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ)

ಕ್ರಿಯಾತ್ಮಕ ಹಾಗೂ ಪ್ರಗತಿಶೀಲ ಅರ್ಥವ್ಯವಸ್ಥೆ





## ಯುವ ಸಬಲೀಕರಣದ ಚಿಂತನೆಗಳನ್ನು ಮಾಡುವ ಯುವಕರ ಕಣ್ಮಣಿ

# ಶ್ರೀ ಬಸವಪ್ರಸಾದ ಜೊಲ್ಲೆ ಅವರಿಗೆ 28ನೇ ಹುಟ್ಟುಹಬ್ಬದ ಶುಭಾಶಯಗಳು

ಯುವ ಸಬಲೀಕರಣ ಹಾಗೂ ಯುವಕರ ಸರ್ವತೋಮುಖ ವಿಕಾಸಗೋಸ್ಕರ ಯುವಕರ ಕಣ್ಮಣಿ ಬಸವಜ್ಯೋತಿ ಯುಥ್ ಫೌಂಡೇಶನ್ ಅಧ್ಯಕ್ಷರಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರು ಅತ್ಯಂತ ಉತ್ಸಾಹದಿಂದ ಕ್ರೀಯಾಶೀಲತೆಯಿಂದ ಯುವಕರ ಮತ್ತು ಜನಪರ ಯೋಜನೆಗಳಿಗೆ ಅವಕಾಶ ಕಲ್ಪಿಸಿಕೊಟ್ಟು ಅನುಷ್ಠಾನಕ್ಕೆ ತರುವುದರ ಮೂಲಕ ಸಮಾಜಕ್ಕೆ ಮಾದರಿ ಯುವನಾಯಕರಾಗಿದ್ದಾರೆ.

ತಂದೆ–ತಾಯಿಗಳ ಆಶೀರ್ವಾದ, ಸಲಹೆ ಸೂಚನೆ ಮತ್ತು ಅತ್ಯುತ್ತಮ ಮಾರ್ಗದರ್ಶನದಡಿಯಲ್ಲಿ ಸಹಕಾರ, ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದ ಉಸ್ತುವಾರಿಯ ಜವಾಬ್ದಾರಿಯನ್ನು ಅತ್ಯಂತ ಕಾಳಜಿಪೂರ್ವಕ ನಿರ್ವಹಣೆ ಮಾಡುವುದರ ಮೂಲಕ ಎಲ್ಲ ಕ್ಷೇತ್ರಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಇವರ ಪಾತ್ರ ಬಹುಮುಖವಾಗಿದೆ. ಗ್ರಾಮೀಣ ಭಾಗದ ಜನತೆಯ ಹಿತ ಮತ್ತು ಪ್ರಗತಿಗಾಗಿ ಜೊಲ್ಲೆ ಮನೆತನದ ಶ್ರಮ ಅಪಾರವಾಗಿದೆ ಎಂಬುವುದಕ್ಕೆ ಇವರು ಮನೆತನದ ನಾಲ್ಕು ಆಧಾರ ಸ್ತಂಭಗಳಲ್ಲಿ ಪ್ರಮುಖ ಆಧಾರ ಸ್ತಂಭವಾಗಿ ಗ್ರಾಮೀಣ ಭಾಗದ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದು ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಸಮಾಜದ ಬೆಳವಣಿಗೆ ಮತ್ತು ವಿಕಾಸ, ಅತ್ಯುತ್ತಮ ಜನಪರ ಯೋಜನೆಗಳು, ಅತ್ಯುತ್ತಮ ಜನಪರ ಚಿಂತನೆಗಳು ಮತ್ತು ಆಲೋಚನೆಗಳು, ಕಠಿಣ ಪರಿಶ್ರಮ ಹಾಗೂ ನಿರಂತರ ಸಂಘರ್ಷದಿಂದಲೇ ಜನತೆಯ ಮೆಚ್ಚುಗೆಗೆ ಪಾತ್ರವಾಗಲು ಸಾಧ್ಯ ಎಂಬುವುದನ್ನು ಜೊಲ್ಲೆ ಮನೆತನದ ಭರವಸೆಯ ಶ್ರೇಷ್ಠ ಕುಡಿಯಾದ ಶ್ರೀ. ಬಸವಪ್ರಸಾದ ಜೊಲ್ಲೆ ಯವರೇ ಸತ್ಯ ನಿದರ್ಶನವಾಗಿದ್ದಾರೆ. ಭಾರತೀಯ ಸರ್ವ ಶ್ರೇಷ್ಠ ಸಂಸ್ಕೃತಿಯನ್ನು ತಮ್ಮಲ್ಲಿ ಹಾಸುಹೊಕ್ಕಾಗಿಸಿಕೊಂಡು ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ಅಪೇಕ್ಷಣಿಯವಾದ ಆಧುನೀಕರಣ, ಸಾಮಾಜಿಕರಣ, ಸಾಂಸ್ಕೃತಿಕರಣ, ಯುವಸಬಲೀಕರಣ ಮತ್ತು ಮಹಿಳಾ ಸಬಲೀಕರಣ, ಔದ್ಯೋಗಿಕರಣದ ಮೌಲ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ದಿಟ್ಟ ಹೆಜ್ಜೆಯನ್ನು ಇಡುತ್ತಾ ತಂದೆ ತಾಯಿಯ ಕನಸನ್ನು ನನಸಾಗಿಸಿ ಸಮಾಜದ ಸರ್ವತೋಮುಖ ಕಲ್ಯಾಣದ ಪರಿಕಲ್ಪನೆಯನ್ನು ಧಾರೆಯೆರೆದು ಸಮಾಜಕ್ಕೆ ಆದರ್ಶಪ್ರಾಯವಾಗಿದ್ದಾರೆ.

ಯುವಪರ ಚಿಂತನೆಗಳು, ಧೋರಣೆಗಳು ಮತ್ತು ಜನಹಿತ ಕಾರ್ಯಗಳು, ಅತ್ಯುತ್ತಮವಾದ ಹವ್ಯಾಸಗಳು ಇವರನ್ನು ಯುವನಾಯಕರನ್ನಾಗಿಸಿವೆ. ಇವರಲ್ಲಿರುವ ಚೈತನ್ಯ, ಮೌಲ್ಯಯುತ ಆಲೋಚನೆಗಳು, ಕ್ರೀಯಾತ್ಮಕ ಚಿಂತನೆಗಳು, ಯುವಜನತೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತಿವೆ. ಸ್ವಯಂ ಪ್ರೇರಿತ ಪ್ರಗತಿಪರ ಚಿಂತನೆಗಳು, ಆತ್ಮವಿಶ್ವಾಸ, ದಕ್ಷತೆ, ಪ್ರಜ್ಞಾವಂತಿಕೆ, ರಚನಾತ್ಮಕತೆ, ಜನಹಿತರಕ್ಷಣೆ ಇವರನ್ನು ಉನ್ನತ ಶ್ರೇಣಿಗೆ ಕೊಂಡೊಯ್ಯುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ.

ಉತ್ತಮ ಹವ್ಯಾಸಗಳು ಮತ್ತು ಉತ್ತಮ ಅಭ್ಯಾಸ ಮತ್ತು ತರಬೇತಿ, ಶಿಸ್ತು, ದೇಶಪ್ರೇಮ, ಸಹನಶೀಲಗುಣ, ಮಾನವಿಯ ಮೌಲ್ಯಗಳು, ನೈತಿಕ ಮೌಲ್ಯಗಳು ಹಾಗೂ ಆಧ್ಯಾತ್ಮಕ ಮೌಲ್ಯಗಳಿಗೆ ಹೆಚ್ಚಿನ ಆಧ್ಯತೆ ನೀಡಿ ತಂದೆ–ತಾಯಿ ತೋರಿದ ಮಾರ್ಗದಲ್ಲಿ ನಡೆಯುತ್ತಿದ್ದಾರೆ.

ಸಮಯ ಪ್ರಜ್ಞೆ ಮತ್ತು ಮಾಡುವ ಕಾರ್ಯದಲ್ಲಿ ನಿಷ್ಠೆ, ಸಕಾರಾತ್ಮಕ ಚಿಂತನೆಗಳು ಮತ್ತು ಕ್ರೀಯಾಶೀಲತೆ, ಆತ್ಮವಿಶ್ವಾಸ ಮತ್ತು ಛಲಗಾರಿಕೆ ಒಬ್ಬ ವ್ಯಕ್ತಿಯ ಯಶಸ್ಸಿಗೆ ಆಧಾರಸ್ತಂಭಗಳಾಗಿವೆ. "ಒಬ್ಬ ಯಶಸ್ವಿ ಯುವಕನ ಹಿಂದೆ ತಂದೆ–ತಾಯಿ ಸದಾ ಪ್ರೇರಕ ಶಕ್ತಿಯಾಗಿ ಇರುತ್ತಾರೆ" ಎಂಬುವುದಕ್ಕೆ ಜನಪ್ರಿಯ ಸಂಸದರಾದ ಶ್ರೀ. ಅಣ್ಣಾಸಾಹೇಬ ಜೊಲ್ಲೆ ಹಾಗೂ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರೇ ಸಾಕ್ಷಿಯಾಗಿದ್ದಾರೆ. ಯಾವುದೇ ತಾರತಮ್ಯವಿಲ್ಲದೆ ಅಸಹಾಯಕರು, ದುರ್ಬಲರು ಮತ್ತು ಜನಸಾಮಾನ್ಯರ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ತಂದೆತಾಯಿಗಳ ಜೊತೆಗೆ ಕಂಕಣಬದ್ಧರಾಗಿ ಕಾರ್ಯ ನಿರ್ವಹಿಸುವುದರಲ್ಲಿ ಇವರು ಸದಾ ಎತ್ತಿದ ಕೈ.

ಸದಾ ಪರಹಿತ ರಕ್ಷಣೆ, ಪರರಿಗೆ ಸಹಕಾರ, ಸಹಾಯ ಹಸ್ತ, ನೆರವು ಮತ್ತು ನೈತಿಕ ಬೆಂಬಲ ನೀಡುವುದರ ಮೂಲಕ ಜನಮಾನಸದಲ್ಲಿ ಆಳವಾಗಿ ಬೇರೂರಿ ಪ್ರತಿಕ್ಷಣ ಜನರ ಸರ್ವತೋಮುಖ ಬೆಳವಣಿಗೆಗೆ ಜನಪರ ಮತ್ತು ಯುವಪರ ಚಿಂತನೆಗಳನ್ನು ಮಾಡುವ ಶ್ರೀ. ಬಸವಪ್ರಸಾದ ಜೊಲ್ಲೆ ಯವರಿಗೆ ಹುಟ್ಟುಹಬ್ಬದ ಅನಂತಕೋಟಿ ಶುಭಾಷಯಗಳು. 28ನೇ ವರ್ಷದಲ್ಲಿ ಪಾದಾರ್ಪಣೆ ಮಾಡಿರುವ ಇವರಿಗೆ ಭಗವಂತನು ಆಯುರ್ಆರೋಗ್ಯ ಬಾಗ್ಯ ಕಲ್ಪಿಸಿ ಜನಸೇವೆಗೆ ಇವರಲ್ಲಿರುವ ಕ್ರೀಯಾಶೀಲತೆ ಮತ್ತು ಚೈತನ್ಯ ಸಹಸ್ರಮಡಿಯಾಗಲೆಂದು ಮನಃಪೂರ್ವಕ ಪ್ರಾರ್ಥಿಸೋಣ !


ಪ್ರೊ. ಬಾಬಾಸಾಹೇಬ ಆರ್. ಕಾಮನಗೋಳ

ಸಹ ಪ್ರಾಧ್ಯಾಪಕರು

ಡಾ॥ ಬಾಬಾಸಾಹೇಬ ಅಂಬೇಡ್ಕರ (ಬಿ.ಇಡಿ.)

ಶಿಕ್ಷಣ ಮಹಾವಿದ್ಯಾಲಯ, ನಣದಿ

## ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ

# 77 ನೇ ಸ್ವಾತಂತ್ರ್ಯ ದಿನಾಚರಣೆ




ಶಿವಶಂಕರ ಜೊಲ್ಲೆ ಕನ್ನಡ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಯಕ್ಸಂಬಾದಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತಿ ವಿಜೃಂಭಣೆಯಿಂದ ಆಚರಿಸಿಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಶಾಜ್ಯೋತಿ ವಿಶೇಷ ಮಕ್ಕಳ ವಸತಿ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಅಣ್ಣಾಸಾಹೇಬ ಜೊಲ್ಲೆ ಅವರು ಧ್ವಜಾರೋಹಣ ನೆರವೇರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಜೊಲ್ಲೆ ಗ್ರೂಪ್ ಸಂಸ್ಥಾಪಕರು ಹಾಗೂ ಚಿಕ್ಕೋಡಿ ಸಂಸದರು ಶ್ರೀ ಅಣ್ಣಾಸಾಹೇಬ ಜೊಲ್ಲೆ ಮುಖ್ಯ ಅತಿಥಿ ಸ್ಥಾನವನ್ನು ವಹಿಸಿ ಪೂರ್ವ ಪ್ರಾಥಮಿಕ ವಿಭಾಗದ ಮಕ್ಕಳಿಗಾಗಿ ಆಯೋಜಿಸಿದ ಚಿತ್ರಕಲೆ ಹಾಗೂ ಆಹಾರಮೇಳ ಪ್ರದರ್ಶನವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವ್ಹಿ.ಆರ್.ಭಿವಸೆ ಮಾತನಾಡಿ "ಭಾರತವು ಅನೇಕ ಸ್ವಾತ್ರಂತ್ರ ಹೋರಾಟಗಾರರ ತ್ಯಾಗ ಬಲಿದಾನ ಹಾಗೂ ಅನೇಕ ದಂಗೆ ಹೋರಾಟಗಳ ಪ್ರತಿಫಲವಾಗಿ ಸ್ವಾತಂತ್ರ್ಯವನ್ನು ಪಡೆದು ಇಂದು ನಾವು ಅದರ ಸವಿ ನೆನಪಿಗಾಗಿ ದೇಶಾದ್ಯಂತ ಅತಿ ವಿಜೃಂಭಣೆಯಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತಿದ್ದು, ಸ್ವಾತಂತ್ರ್ಯಕ್ಕಾಗಿ ಮಡಿದ ವೀರರನ್ನು ಸ್ಮರಿಸಿ ಅವರ ತತ್ವಗಳನ್ನು ಆದರ್ಶಗಳನ್ನು ಪಾಲಿಸಿ ಮೈಗೂಡಿಸಿಕೊಂಡು ರಾಷ್ಟ್ರದ ಪ್ರಗತಿಗೆ ನಾವೆಲ್ಲರೂ ಬದ್ಧರಾಗಬೇಕೆಂದು ತಿಳಿಸಿದರು".

ಈ ಸಂದರ್ಭದಲ್ಲಿ ಜೊಲ್ಲೆ ಗ್ರೂಪ್ ವಿವಿಧ ಅಂಗ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರಾದ ಜಯಾನಂದ ಜಾಧವ, ಲಕ್ಷ್ಮಣ ಕಬಾಡೆ, ಬಾಬುರಾವ ಮಾಳಿ, ಅಪ್ಪಾಸಾಬ ಜೊಲ್ಲೆ, ಅನುಸಯಾ ಪಾಟೀಲ, ಲಕ್ಷ್ಮೀಬಾಯಿ ಮೇತ್ರೆ, ಗಿರೀಜಾ ಪಾಟೀಲ, ಫೈಮೀದಾ ದಾಡಿವಾಲೆ, ಲತಾ ವಾಳಕೆ, ಮಹಾದೇವಿ ಡೊಂಗರೆ, ಸಂಸ್ಥೆಯ ಸಿ.ಇ.ಓಗಳಾದ ವಿವೇಕಾನಂದ ಬಂಕೊಳ್ಳಿ, ಪ್ರಧಾನ ವ್ಯವಸ್ಥಾಪಕರಾದ ಆರ್.ಸಿ.ಚೌಗಲಾ, ವಿಜಯ ಖಡಕಬಾವಿ ಉಪಸ್ಥಿತರಿದ್ದರು, ಬೀರೇಶ್ವರ ಕೋ- ಆಫ್ ಕ್ರೆಡಿಟ್ ಸೊಸಾಯಿಟಿ ಲಿಮಿಟೆಡ್ ಯಕ್ಸಂಬಾ (ಮಲ್ಟಿಸ್ಟೇಟ್) ಹಾಗೂ ಜ್ಯೋತಿ ವಿವಿಧ ಉದ್ದೇಶಗಳ ಸಹಕಾರಿ ಸಂಘದ ಉಪಪ್ರಧಾನ ವ್ಯವಸ್ಥಾಪಕರು, ಸಿಬ್ಬಂದಿ ವರ್ಗದವರು, ಪಾಲಕರು, ಶಾಲೆಯ ಎಲ್ಲ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕು. ಮಂಜುಳಾ ಕಾಂಡಗಾವೆ ನಿರೂಪಿಸಿ, ಆಶಾ ಚವ್ಹಾಣ ಸ್ವಾಗತಿಸಿ, ಸೂರಜ ನಿಡಗುಂದೆ ವಂದಿಸಿದರು.

# ರಾಷ್ಟ್ರೀಯ ಕ್ರೀಡಾ ದಿನ 2023

ಪ್ರತಿ ವರ್ಷ ಆಗಸ್ಟ್ 29 ಅನ್ನು ಭಾರತದಲ್ಲಿ ರಾಷ್ಟ್ರೀಯ ಕ್ರೀಡಾ ದಿನವನ್ನಾಗಿ ಆಚರಿಸಲಾಗುತ್ತದೆ. ಈ ದಿನವು ಭಾರತದ ಫೀಲ್ಡ್ ಹಾಕಿ ಆಟಗಾರ, ಇತಿಹಾಸದಲ್ಲಿ ಶ್ರೇಷ್ಠ ಫೀಲ್ಡ್ ಹಾಕಿ ಆಟಗಾರರಲ್ಲಿ ಒಬ್ಬರೆಂದು ವ್ಯಾಪಕವಾಗಿ ಪರಿಗಣಿಸಲ್ಪಟ್ಟಿರುವ ಮೇಜರ್ ಧ್ಯಾನ್ ಚಂದ್ ಅವರ ಜನ್ಮ ವಾರ್ಷಿಕೋತ್ಸವವನ್ನು ಸೂಚಿಸುತ್ತದೆ. ಈ ದಿನದ ಆಚರಣೆಯ ಘೋಷಣೆಯನ್ನು 2012 ರಲ್ಲಿ ಅಂಗೀಕರಿಸಲಾಯಿತು ಮತ್ತು ಮೊದಲ ರಾಷ್ಟ್ರೀಯ ಕ್ರೀಡಾ ದಿನವನ್ನು 29 ಆಗಸ್ಟ್ 2012 ರಂದು ಆಚರಿಸಲಾಯಿತು.

### ರಾಷ್ಟ್ರೀಯ ಕ್ರೀಡಾ ದಿನದ ಮಹತ್ವ

ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸುವುದರ ಹಿಂದಿನ ಮುಖ್ಯ ಉದ್ದೇಶವೆಂದರೆ ದೇಶದ ಯುವಜನರಲ್ಲಿ ಕ್ರೀಡಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು. 1905 ರಲ್ಲಿ ಇದೇ ದಿನ ಜನಿಸಿದ ಭಾರತದ ಶ್ರೇಷ್ಠ ಹಾಕಿ ಆಟಗಾರ ಮೇಜರ್ ಧ್ಯಾನ್ ಚಂದ್ ಅವರ ಗೌರವಾರ್ಥ ಆಗಸ್ಟ್ 29 ಅನ್ನು ಆಯ್ಕೆ ಮಾಡಲಾಯಿತು. ಈ ದಿನದಂದು ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ ಅಲ್ಲಿ ವಿವಿಧ ಕ್ರೀಡಾಪಟುಗಳು, ವ್ಯಕ್ತಿಗಳು ಮತ್ತು ತಂಡಗಳಿಗೆ ಗೌರವವನ್ನು ನೀಡಲಾಗುತ್ತದೆ.

ದಿನನಿತ್ಯದ ಜೀವನದಲ್ಲಿ ಕ್ರೀಡೆ ಮತ್ತು ದೈಹಿಕ ಚಟುವಟಿಕೆಯ ಮೌಲ್ಯದ ಅರಿವು ಮೂಡಿಸಲು ರಾಷ್ಟ್ರೀಯ ಕ್ರೀಡಾ ದಿನವನ್ನು ಸಹ ಆಚರಿಸಲಾಗುತ್ತದೆ. ಮೊದಲ ವೀಕ್ಷಣೆಯನ್ನು 2012 ರಲ್ಲಿ ಮಾಡಲಾಯಿತು ಮತ್ತು ಅಂದಿನಿಂದ ಸರ್ಕಾರವು ಹಲವಾರು ಕ್ರೀಡೆಗಳಿಗೆ ಸಂಬಂಧಿಸಿದ ಯೋಜನೆಗಳನ್ನು ಘೋಷಿಸಲು ಈ ದಿನವನ್ನು ಒಂದು ಸಂದರ್ಭವಾಗಿ ಬಳಸಿಕೊಂಡಿದೆ.

### ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಇತಿಹಾಸ

2012 ರಲ್ಲಿ, ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ಆಗಸ್ಟ್ 29 ಅನ್ನು ದೇಶದ ರಾಷ್ಟ್ರೀಯ ಕ್ರೀಡಾ ದಿನವನ್ನಾಗಿ ಆಚರಿಸಲು ಘೋಷಿಸಿತು. ರಾಷ್ಟ್ರೀಯ ಕ್ರೀಡಾ ದಿನದ ಮೊದಲ ಆಚರಣೆಯನ್ನು ಅದೇ ವರ್ಷ ಮತ್ತು ಅಂದಿನಿಂದ ಪ್ರತಿ ವರ್ಷ ಆಚರಿಸಲಾಯಿತು. 2023 ರಾಷ್ಟ್ರೀಯ ಕ್ರೀಡಾ ದಿನಾಚರಣೆಯ 12 ನೇ ವಾರ್ಷಿಕೋತ್ಸವವನ್ನು ಗುರುತಿಸುತ್ತದೆ. ಶ್ರೇಷ್ಠ ಫೀಲ್ಡ್ ಹಾಕಿ ಆಟಗಾರ ಮೇಜರ್ ಧ್ಯಾನ್ ಚಂದ್ ಅವರ ಜನ್ಮ ವಾರ್ಷಿಕೋತ್ಸವದ ನೆನಪಿಗಾಗಿ ಆಗಸ್ಟ್ 29 ಅನ್ನು ಆಯ್ಕೆ ಮಾಡಲಾಗಿದೆ.

### ಮೇಜರ್ ಧ್ಯಾನ್ ಚಂದ್ ಯಾರು?

ಬಹುಶಃ ಭಾರತದ ಶ್ರೇಷ್ಠ ಫೀಲ್ಡ್ ಹಾಕಿ ಮೇಜರ್ ಧ್ಯಾನ್ ಚಂದ್ ಅವರ ಪರಂಪರೆಯನ್ನು ಗೌರವಿಸಲು ಆಗಸ್ಟ್ 29 ರಂದು ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಲಾಗುತ್ತದೆ. ಅವರ ಅಸಾಧಾರಣ ಆಟವು 1928 ರಿಂದ 1964 ರವರೆಗಿನ ಎಂಟು ಒಲಿಂಪಿಕ್ಸ್‌ಗಳಲ್ಲಿ ಏಳರಲ್ಲಿ ಫೀಲ್ಡ್ ಹಾಕಿ ಪಂದ್ಯಾವಳಿಯನ್ನು ಗೆಲ್ಲಲು ಭಾರತಕ್ಕೆ ಕಾರಣವಾಯಿತು. ಧ್ಯಾನ್ ಚಂದ್ ಸ್ವತಃ 1928, 1932 ಮತ್ತು 1936 ರಲ್ಲಿ ಸತತ ಮೂರು ಒಲಿಂಪಿಕ್ ಚಿನ್ನದ ಪದಕಗಳನ್ನು ಗೆದ್ದರು.

ಅವರನ್ನು BBC ಯಿಂದ ಹಾಕಿ ಮೊಹಮ್ಮದ್ ಅಲಿ ಎಂದು ಕರೆಯಲಾಯಿತು ಮತ್ತು ಅವರ ಉನ್ನತ ಚೆಂಡನ್ನು ನಿಯಂತ್ರಣ ಕೌಶಲ್ಯದ ಕಾರಣದಿಂದಾಗಿ ದಿ ವಿಝಾರ್ಡ್ ಅಥವಾ ದಿ ಮ್ಯಾಜಿಶಿಯನ್ ಆಫ್ ಹಾಕಿ ಎಂಬ ಅಡ್ಡಹೆಸರುಗಳನ್ನು ಗಳಿಸಿದರು. ಯಕೃತ್ತಿನ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಧ್ಯಾನ್ ಚಂದ್ 1979 ರಲ್ಲಿ ನಿಧನರಾದರು ಆದರೆ ಭಾರತೀಯ ಮತ್ತು ವಿಶ್ವ ಹಾಕಿಯಲ್ಲಿ ಇನ್ನೂ ಪೌರಾಣಿಕ ವ್ಯಕ್ತಿಯಾಗಿ ಉಳಿದಿದ್ದಾರೆ.

ಧ್ಯಾನ್ ಚಂದ್ ಅವರಿಗೆ 1956 ರಲ್ಲಿ ಭಾರತದ ಮೂರನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮಭೂಷಣವನ್ನು ನೀಡಲಾಯಿತು. ಮೇಲಾಗಿ, ಅವರ ಗೌರವಾರ್ಥವಾಗಿ ಹೆಸರಿಸಲಾದ ಅನೇಕ ಪ್ರಶಸ್ತಿಗಳಿವೆ, ಕ್ರೀಡೆ ಮತ್ತು ಆಟಗಳಲ್ಲಿ ಜೀವಮಾನದ ಸಾಧನೆಗಳಿಗಾಗಿ ಮೇಜರ್ ಧ್ಯಾನ್ ಚಂದ್ ಪ್ರಶಸ್ತಿಯು ಹೆಚ್ಚು ಗಮನಾರ್ಹವಾಗಿದೆ. 2021 ರಲ್ಲಿ, ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ಅವರ ಗೌರವಾರ್ಥವಾಗಿ ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಯನ್ನು ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ ಎಂದು ಮರುನಾಮಕರಣ ಮಾಡಿತು.

### ರಾಷ್ಟ್ರೀಯ ಕ್ರೀಡಾ ದಿನದ ಆಚರಣೆ

ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಲು, ಭಾರತ ಸರ್ಕಾರವು ತಂಡಗಳು ಮತ್ತು ಆಟಗಾರರಿಗೆ ಬಹು ಗೌರವಗಳು ಮತ್ತು ಪ್ರಶಸ್ತಿಗಳನ್ನು ನೀಡುತ್ತದೆ. ಕ್ರೀಡೆಗೆ ನೀಡಿದ ಕೊಡುಗೆಗಳಿಗಾಗಿ ಕ್ರೀಡಾ ವೀರರನ್ನು ಗುರುತಿಸಲಾಗುತ್ತದೆ ಮತ್ತು ರಾಷ್ಟ್ರಪತಿ ಭವನದಲ್ಲಿ ಭಾರತದ ರಾಷ್ಟ್ರಪತಿಗಳು ವಿವಿಧ ಪ್ರಶಸ್ತಿಗಳನ್ನು ನೀಡುವ ಸಮಾರಂಭವನ್ನು ನಡೆಸಲಾಗುತ್ತದೆ. ಒಬ್ಬ ವ್ಯಕ್ತಿಯಾಗಿ, ನಿಮ್ಮ ಆಯ್ಕೆಯ ಕ್ರೀಡಾಕೂಟಗಳನ್ನು ನೀವು ಆಯೋಜಿಸಬಹುದು ಮತ್ತು ಭಾಗವಹಿಸಬಹುದು. ನಿಮ್ಮ ಸ್ನೇಹಿತರೊಂದಿಗೆ ತಂಡವನ್ನು ಮಾಡಿ ಅಥವಾ ರಾಷ್ಟ್ರೀಯ ಕ್ರೀಡಾ ದಿನದ ಸಂದರ್ಭದಲ್ಲಿ ಆಯೋಜಿಸಲಾದ ಶಾಲಾ ಆಧಾರಿತ ಈವೆಂಟ್‌ಗಳಲ್ಲಿ ಭಾಗವಹಿಸಿ.



ಚಿಕ್ಕೋಡಿ ತಾಲೂಕಿನ ಯಕ್ಸಂಬಾ ಪಟ್ಟಣದ ಶಿವಶಂಕರ ಜೊಲ್ಲೆ ಕನ್ನಡ ಮಾಧ್ಯಮ ಶಾಲಾ ಮಕ್ಕಳು ಇಸ್ರೋದ ಚಂದ್ರಯಾನ-3 ಯೋಜನೆಗೆ ಯಶಸ್ಸು ಸಿಕ್ಕ ಹಿನ್ನಲೆಯಲ್ಲಿ ಸಂಭ್ರಮಪಟ್ಟು ಜೈ ಇಸ್ರೋ ಪದ ಹೋಲುವಂತೆ ಪೋಟೋಗೆ ಪೋಸ್ ನಿಡಿದ ದೃಶ್ಯ.

ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಯಕ್ಸಂಬಾ




# ವಿಶ್ವ ಛಾಯಾಗ್ರಹಣ ದಿನ 2023

ಛಾಯಾಗ್ರಹಣವು ಒಂದು ಕಲಾ ಪ್ರಕಾರವಾಗಿದ್ದು, ಇದು ದೃಶ್ಯ ರೂಪದಲ್ಲಿ ಕ್ಷಣಗಳು ಮತ್ತು ಭಾವನೆಗಳನ್ನು ಸೆರೆಹಿಡಿಯುವ ಒಂದು ಅದ್ಭುತವಾಗಿದೆ. ಈ ಕಲಾ ಪ್ರಕಾರವು 19 ನೇ ಶತಮಾನದ ಆರಂಭದಲ್ಲಿ ಪ್ರಾರಂಭವಾದಾಗಿನಿಂದಲೂ ಗಮನಾರ್ಹವಾಗಿ ವಿಕಸನಗೊಂಡಿದೆ ಮತ್ತು ತಂತ್ರಜ್ಞಾನವು ಮುಂದುವರದಂತೆ ವಿಕಸನಗೊಳ್ಳುತ್ತಲೇ ಇದೆ. ಛಾಯಾಗ್ರಹಣದ ಹಿಂದಿನ ಕಲೆ, ವಿಜ್ಞಾನ ಮತ್ತು ಇತಿಹಾಸವನ್ನು ಸ್ಮರಿಸಲು ಪ್ರಪಂಚದಾದ್ಯಂತ ಆಗಸ್ಟ್ 19ರಂದು ವಿಶ್ವ ಛಾಯಾಗ್ರಹಣ ದಿನವನ್ನು ಆಚರಿಸಲಾಗುತ್ತದೆ. ಈ ದಿನದ ಹಿಂದಿನ ಇತಿಹಾಸ ಏನೆಂಬುದನ್ನು ನೋಡೋಣ.

ಛಾಯಾಗ್ರಹಣವು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಇದು ದೃಶ್ಯ ರೂಪದಲ್ಲಿ ಕ್ಷಣಗಳು ಮತ್ತು ಭಾವನೆಗಳನ್ನು ಸೆರೆಹಿಡಿಯುತ್ತದೆ. ಛಾಯಾಗ್ರಹಣವು ಕಲೆಯ ಒಂದು ರೂಪವಾಗಿದ್ದು, ಸಮಯ, ಬೆಳಕು, ನೆನಪುಗಳು, ಭಾವನೆಗಳು, ಸಂಸ್ಕೃತಿ, ಇತಿಹಾಸ ಮತ್ತು ಹೆಚ್ಚಿನವುಗಳ ಸತ್ಯಾಸತ್ಯತೆಯನ್ನು ಸುಂದರವಾಗಿ ಸೆರೆಹಿಡಿಯುವ ಮೂಲಕ ನೆನಪುಗಳ ಕಥೆ ಹೇಳುವ ಅತ್ಯುತ್ತಮ ಮಾಧ್ಯಮವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಒಬ್ಬ ಛಾಯಾಗ್ರಹಕ ಅಡಗಿದ್ದಾನೆ. ಮತ್ತು ನಾವೆಲ್ಲರೂ ಅದರೊಂದಿಗೆ ಸಂಬಂಧ ಹೊಂದಿದ್ದೇವೆ. ನಾವುಗಳು ಮೊಬೈಲ್ ಕ್ಯಾಮೆರಾದ ಮೂಲಕ ನಮ್ಮ ಪ್ರತಿಯೊಂದು ಸುಂದರ ಕ್ಷಣಗಳನ್ನು ಸೆರೆಹಿಡಿಯುತ್ತೇವೆ. ಅದೇ ರೀತಿ ಅದೆಷ್ಟೋ ವೃತ್ತಿಪರ, ಹವ್ಯಾಸಿ ಛಾಯಾಗ್ರಾಹಕರಿದ್ದಾರೆ. ಅವರೆಲ್ಲರನ್ನು ಪ್ರೋತ್ಸಾಹಿಸಲು ಮತ್ತು ಗೌರವಿಸಲು ಪ್ರತಿವರ್ಷ ಆಗಸ್ಟ್ 19 ರಂದು ವಿಶ್ವ ಛಾಯಾಗ್ರಹಣ ದಿನವನ್ನು ಆಚರಿಸಲಾಗುತ್ತದೆ. ಆಗಸ್ಟ್ 19 ರಂದು ಈ ವಿಶೇಷ ದಿನವನ್ನು ಏಕೆ ಆಚರಿಸಲಾಗುತ್ತದೆ? ಈ ದಿನದ ಇತಿಹಾಸ ಏನೆಂಬುದನ್ನು ತಿಳಿಯೋಣ.

**ಛಾಯಾಗ್ರಹಣ ದಿನದ ಇತಿಹಾಸ:**

ಛಾಯಾಗ್ರಹಣ ದಿನದ ಆಚರಣೆಯು ಜನವರಿ 9, 1839 ರಂದು ಫ್ರಾನ್ಸ್‌ನಲ್ಲಿ ಪ್ರಾರಂಭವಾಯಿತು. ಇದರ ಹಿಂದಿನ ಕಥೆಯೆಂದರೆ, 1839 ರ ಸಮಯದಲ್ಲಿ ಛಾಯಾಗ್ರಹಣ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಇದನ್ನು ಡಾಗ್ಯೂರೈಪ್ ಪ್ರಕ್ರಿಯೆ ಎಂದು ಕರೆಯಲಾಯಿತು. ಮತ್ತು ಈ ಪ್ರಕ್ರಿಯೆಯನ್ನು ವಿಶ್ವದ ಮೊದಲ ಛಾಯಾಗ್ರಹಣ ಪ್ರಕ್ರಿಯೆ ಎಂದು ಪರಿಗಣಿಸಲಾಗಿದೆ. ಇದನ್ನು ಫ್ರಾನ್ಸ್ ನ ಜೋಸೆಫ್ ನೈಸ್ ಫೋರ್ ಮತ್ತು ಲೂಯಿಸ್ ಡಾಗೆರೆ ಕಂಡುಹಿಡಿದರು. ಇದರ ನಂತರ ಆಗಸ್ಟ್ 19, 1839 ರಂದು ಫ್ರೆಂಚ್ ಸರ್ಕಾರವು ಈ ಛಾಯಾಗ್ರಹಣ ಆವಿಷ್ಕಾರವನ್ನು ಘೋಷಿಸಿ ಅದರ ಪೇಟೆಂಟ್ ನ್ನು ಪಡೆದುಕೊಂಡಿತು. ಇದರ ನೆನಪಿಗಾಗಿ ಪ್ರತಿವರ್ಷ ಆಗಸ್ಟ್ 19 ರಂದು ವಿಶ್ವ ಛಾಯಾಗ್ರಹಣ ದಿನವನ್ನು ಆಚರಿಸಲಾಗುತ್ತಿದೆ.

ಅನೇಕ ಜನರಿಗೆ ಛಾಯಾಗ್ರಹಣವು ಅವರ ಹವ್ಯಾಸವಾಗಿದೆ. 19ನೇ ಶತಮಾನದ ಆರಂಭದಿಂದಲೂ ಛಾಯಾಗ್ರಹಣದ ಉದ್ಯಮವು ಪ್ರಗತಿಯಲ್ಲಿದೆ ಮತ್ತು ಈ ಉದ್ಯಮವು ಮೈಲಿಗಲ್ಲನ್ನು ಸಾಧಿಸುತ್ತಿದೆ. ಕ್ಯಾಮೆರಾ ತಂತ್ರಜ್ಞಾನದಲ್ಲಿನ ಪ್ರಗತಿಗಳು ಇಂದು ಡಿಜಿಟಲ್ ಫೋಟೋಗ್ರಫಿಗೆ ಕಾರಣವಾಗಿದೆ. ಅಲ್ಲದೆ ಇಂದು ಫೋಟೋಗ್ರಫಿ ಒಂದು ಫ್ಯಾಷನ್ ಆಗಿ ಬದಲಾಗಿದೆ. ಇಂದು ಅದೆಷ್ಟೋ ಛಾಯಾಗ್ರಾಹರು ಈ ಕ್ಷೇತ್ರವನ್ನು ತಮ್ಮ ಉದ್ಯಮವನ್ನಾಗಿ ಮಾಡಿಕೊಂಡು ಹೆಸರುಗಳಿಸಿದ್ದಾರೆ. ಅಂತಹ ಛಾಯಾಗ್ರಹಕರನ್ನು ಗೌರವಿಸಲು ಮತ್ತು ಛಾಯಾಗ್ರಹಣದಲ್ಲಿ ಆಸಕ್ತಿ ಹೊಂದಿದವರನ್ನು ಪ್ರೋತ್ಸಾಹಿಸಲು ಪ್ರತಿವರ್ಷ ಆಗಸ್ಟ್ 19 ರಂದು ವಿಶ್ವ ಛಾಯಾಗ್ರಹಣ ದಿನವನ್ನು ಆಚರಿಸಲಾಗುತ್ತದೆ.

**ವಿಶ್ವ ಛಾಯಾಗ್ರಹಣ ದಿನದ ಪ್ರಾಮುಖ್ಯತೆ:**

ವಿಶ್ವ ಛಾಯಾಗ್ರಹಣ ದಿನವನ್ನು ಛಾಯಾಗ್ರಹಣ ಕ್ಷೇತ್ರದಲ್ಲಿ ಗಮನಾರ್ಹ ಕೊಡುಗೆ ನೀಡಿದ ಜನರನ್ನು ಗೌರವಿಸಲು ಮತ್ತು ಅವರ ಸಾಧನೆಯನ್ನು ನೆನಪಿಸಲು ಆಚರಿಸಲಾಗುತ್ತದೆ. ಅಲ್ಲದೆ ಇದು ಜನರನ್ನು ಛಾಯಾಗ್ರಹಣ ಕ್ಷೇತ್ರಕ್ಕೆ ಬರುವಂತೆ ಪ್ರೋತ್ಸಾಹಿಸುತ್ತದೆ ಮತ್ತು ಅವರ ಕೌಶಲ್ಯವನ್ನು ತೋರಿಸಲು ಪ್ರೇರೇಪಿಸುತ್ತದೆ.

# ವಿಶ್ವ ಅಂಗದಾನ ದಿನ-2023

ವಿಶ್ವ ಅಂಗದಾನ ದಿನ 2023 ಅನ್ನು ಆಗಸ್ಟ್ 13, 2023 ರಂದು ಆಚರಿಸಲಾಗುತ್ತದೆ. ಅಂಗಾಂಗ ದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅಂಗಾಂಗ ದಾನಿಗಳಾಗಲು ಜನರನ್ನು ಉತ್ತೇಜಿಸಲು ಇದು ಜಾಗತಿಕ ಕಾರ್ಯಕ್ರಮವಾಗಿದೆ. ಅಂಗಾಂಗ ದಾನವು ಅವರ ಜೀವನದ ಗುಣಮಟ್ಟವನ್ನು ಬದುಕಲು ಅಥವಾ ಸುಧಾರಿಸಲು ಅಗತ್ಯವಿರುವ ಬೇರೆಯವರಿಗೆ ಅಂಗ ಅಥವಾ ಅಂಗಾಂಶವನ್ನು ನೀಡುವ ಪ್ರಕ್ರಿಯೆಯಾಗಿದೆ. ದಾನ ಮಾಡಬಹುದಾದ ಅಂಗಗಳಲ್ಲಿ ಮೂತ್ರಪಿಂಡಗಳು, ಯಕೃತ್ತುಗಳು, ಹೃದಯಗಳು, ಶ್ವಾಸಕೋಶಗಳು, ಮೇದೋಜೀರಕ ಗ್ರಂಥಿಗಳು ಮತ್ತು ಕರುಳುಗಳು ಸೇರಿವೆ. ದಾನ ಮಾಡಬಹುದಾದ ಅಂಗಾಂಶಗಳಲ್ಲಿ ಕಾರ್ನಿಯಾಗಳು, ಚರ್ಮ, ಮೂಳೆ, ಹೃದಯ ಕವಾಟಗಳು ಮತ್ತು ಸ್ನಾಯುರಜ್ಜುಗಳು ಸೇರಿವೆ.

ಯುನೈಟೆಡ್ ಸ್ಟೇಟ್ಸ್‌ನಲ್ಲಿ ಪ್ರಸ್ತುತ 100,000 ಕ್ಕೂ ಹೆಚ್ಚು ಜನರು ಅಂಗಾಂಗ ಕಸಿಗಾಗಿ ಕಾಯುತ್ತಿದ್ದಾರೆ. ಪ್ರತಿದಿನ, 22 ಜನರು ಕಸಿಗಾಗಿ ಕಾಯುತ್ತಿರುವಾಗ ಸಾಯುತ್ತಾರೆ. ಭಾರತದಲ್ಲಿ 5 ಲಕ್ಷಕ್ಕೂ ಹೆಚ್ಚು ಮಂದಿ ಅಂಗಾಂಗ ಕಸಿಗಾಗಿ ಕಾಯುತ್ತಿದ್ದಾರೆ.

**ವಿಶ್ವ ಅಂಗದಾನ ದಿನ 2023, ಥೀಮ್**

2023 ರ ವಿಶ್ವ ಅಂಗ ದಾನ ದಿನದ ಥೀಮ್ "ಸ್ವಯಂಸೇವಕರಾಗಿ ಹೆಜ್ಜೆ ಹಾಕು; ಕೊರತೆಯನ್ನು ತುಂಬಲು ಹೆಚ್ಚಿನ ಅಂಗ ದಾನಿಗಳ ಅಗತ್ಯವಿದೆ". ಅಂಗಾಂಗ ದಾನಿಗಳಾಗುವ ಮೂಲಕ, ನೀವು ಇತರರ ಜೀವಗಳನ್ನು ಉಳಿಸಬಹುದು. ದಯವಿಟ್ಟು ಇಂದೇ ಅಂಗ ದಾನಿಯಾಗುವುದನ್ನು ಪರಿಗಣಿಸಿ.

**ವಿಶ್ವ ಅಂಗದಾನ ದಿನ, ಮಹತ್ವ**

ವಿಶ್ವ ಅಂಗದಾನ ದಿನದ ಮಹತ್ವ ಏನೆಂದರೆ ಅಂಗಾಂಗ ದಾನದ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ಅಂಗಾಂಗ ದಾನಿಗಳು ಮತ್ತು ಸ್ವೀಕರಿಸುವವರ ಜೀವನವನ್ನು ಆಚರಿಸುವ ದಿನವಾಗಿದೆ. ಅಂಗಾಂಗ ದಾನದ ಬಗ್ಗೆ ಜನರಿಗೆ ತಿಳುವಳಿಕೆ ನೀಡಲು ಮತ್ತು ಅದರ ಸುತ್ತ ಇರುವ ಕೆಲವು ಮಿಥ್ಯೆಗಳು ಮತ್ತು ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಇದು ಒಂದು ದಿನವಾಗಿದೆ.

**ವಿಶ್ವ ಅಂಗದಾನ ದಿನ, ಇತಿಹಾಸ**

ವಿಶ್ವ ಅಂಗ ದಾನ ದಿನವು ಜಾಗತಿಕ ಕಾರ್ಯಕ್ರಮವಾಗಿದ್ದು, ಇದನ್ನು ಪ್ರತಿ ವರ್ಷ ಆಗಸ್ಟ್ 13 ರಂದು ಆಚರಿಸಲಾಗುತ್ತದೆ. ಇದನ್ನು ಮೊದಲು 2005 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ಇಂಟರ್ನ್ಯಾಷನಲ್ ಸೊಸೈಟಿ ಫಾರ್ ಆರ್ಗನ್ ದಾನ (ISOD) ಆಚರಿಸಲಾಯಿತು. ಅಂಗಾಂಗ ದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅಂಗಾಂಗ ದಾನಿಗಳಾಗಲು ಜನರನ್ನು ಉತ್ತೇಜಿಸುವುದು ವಿಶ್ವ ಅಂಗದಾನ ದಿನದ ಉದ್ದೇಶವಾಗಿದೆ.

## ರಾಜ್ಯಸ್ಥಾನ ಪ್ರವಾಸ




ಜೊಲ್ಲೆ ಗ್ರೂಪ್‌ನ ವಿವಿಧ ಅಂಗ ಸಂಸ್ಥೆಗಳ ಮುಖ್ಯ ಕಛೇರಿಯ ಅಧ್ಯಕ್ಷರೂ, ಉಪಾಧ್ಯಕ್ಷರು, ಹಾಗೂ ನಿರ್ದೇಶಕ ಮಂಡಳಿ ಸದಸ್ಯರಿಗೆ ಜೊಲ್ಲೆ ಗ್ರೂಪ್ ವತಿಯಿಂದ ಉಚಿತವಾಗಿ 8 ದಿನಗಳ ಕಾಲ ರಾಜ್ಯಸ್ಥಾನ ಪ್ರವಾಸ ಕೈಗೊಂಡ ಸಂತೋಷದ ಕ್ಷಣಗಳು.



**ಪ್ರಶಸ್ತಿ ಪತ್ರ ವಿತರಣೆ**

ಹುಬ್ಬಳ್ಳಿಯಲ್ಲಿ, ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರ ಸಹಕಾರಿ ಸಂಘಗಳ ಒಕ್ಕೂಟ ನಿ. ಇದರ 30ನೇ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಖಾದ್ಯ ತೈಲ ಮಾರಾಟ, ಎಣ್ಣೆಬೀಜ ಸಂಗ್ರಹಣಾ ಮತ್ತು ಮಾರಾಟ, ಮತ್ತು ಜಿಲ್ಲಾ ಕಚೇರಿವಾರು ಸಾಧನೆ ಮಾಡಿದ ಸಂಘ ಸಂಸ್ಥೆಗಳಿಗೆ ಮತ್ತು ಸಿಬ್ಬಂದಿಗಳಿಗೆ ಪ್ರಶಸ್ತಿ ಪತ್ರ ಮತ್ತು ನಗದು ಬಹುಮಾನ ವಿತರಿಸುತ್ತಿರುವುದು.



**ಚಾಲನೆ ನೀಡುತ್ತಿರುವುದು**

ಅಪ್ಪಾಚಿವಾಡಿ ಗ್ರಾಮದಲ್ಲಿ ಛತ್ರಪತಿ ಶಿವಾಜಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಮಹಾವಿದ್ಯಾಲಯ ನಿಪ್ಪಾಣಿ ವತಿಯಿಂದ ಆಯೋಜಿಸಿದ್ದ, 'ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ' ಎರಡನೇ ದಿನದ ಕಾರ್ಯಕ್ರಮಕ್ಕೆ ನಿಪ್ಪಾಣಿಯ ಶಾಸಕರಾದ ಸೌ ಶಶಿಕಲಾ ಜೊಲ್ಲೆ ಯವರು ಸಸಿಗೆ ನೀರೆರೆಯುವ ಮೂಲಕ ಚಾಲನೆ ನೀಡುತ್ತಿರುವುದು.



**ನೂತನ ಶಾಖೆ ಉದ್ಘಾಟನೆ**

ಬೆಳಗಾವಿಯ ವಡಗಾಂವದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್)155ನೇ ನೂತನ ಶಾಖೆ ವಡಗಾಂವ ಇದರ ಉದ್ಘಾಟನೆಯನ್ನು ಎಡೆಯೂರು ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ, ಡಂಬಳ ಗದಗನ ಪೂಜ್ಯ ಶ್ರೀ ಜಗದ್ಗುರು ತೋಂಟದ ಸಿದ್ದರಾಮ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ ಜ್ಯೋತಿಪ್ರಸಾದ ಜೊಲ್ಲೆ ಯವರು ಉದ್ಘಾಟಿಸುತ್ತಿರುವ ದೃಶ್ಯ.



**ಸತ್ಕರಿಸುತ್ತಿರುವದು**

ಬಸವಜ್ಯೋತಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಕಾಲೇಜಿನ 2023-24 ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ನಿಪ್ಪಾಣಿ ಶಾಸಕರಾದ ಸೌ. ಶಶಿಕಲಾ ಜೊಲ್ಲೆ ಯವರು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸತ್ಕರಿಸುತ್ತಿರುವ ದೃಶ್ಯ.




**ಚಾಲನೆ ನೀಡುತ್ತಿರುವುದು**

ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಚಿಕ್ಕೋಡಿ ಹಾಗೂ ಜೊಲ್ಲೆ ಎಜ್ಯುಕೇಶನ್ ಸೊಸೈಟಿಯ ಸಂಯುಕ್ತಾಶ್ರಯದಲ್ಲಿ ಸನ್ 2023-24 ನೇ ಸಾಲಿನ ತಾಲೂಕಾ ಮಟ್ಟದ ಜುಡೋ ಕ್ರೀಡಾಕೂಟದ ಉದ್ಘಾಟನೆಯನ್ನು ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ. ಜ್ಯೋತಿಪ್ರಸಾದ ಜೊಲ್ಲೆ ಯವರು ಚಾಲನೆ ನೀಡಿದ ದೃಶ್ಯ.




**ನೂತನ ಶಾಖೆ ಉದ್ಘಾಟನೆ**

ಕೊಲ್ಲಾಪುರ ಜಿಲ್ಲೆಯ ಬಾಂಬವಡೆದಲ್ಲಿ ಶ್ರೀ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೋಸಾಯಿಟಿ ಲಿ.,ಯಕ್ಸಂಬಾ (ಮಲ್ಟಿ-ಸ್ಟೇಟ್) 156ನೇ ನೂತನ ಶಾಖೆ ಬಾಂಬವಡೆ ಇದರ ಉದ್ಘಾಟನೆ ಹಾಗೂ ಪೂಜಾ ಸಮಾರಂಭವನ್ನು ಸವತೆ ಶ್ರೀ ಬಾಲದಾಸ ಮಹಾರಾಜ ಮಠದ ಪೀಠಾಧಿಪತಿಗಳಾದ ಶ್ರೀ ಬಾಲಯೋಗಿ ರಾಮದಾಸ ಮಹಾರಾಜರ ಅಮೃತಹಸ್ತದಿಂದ ಉದ್ಘಾಟಿಸಿದ ದೃಶ್ಯ

ಜೊಲ್ಲೆ ಉದ್ಯೋಗ ಸಮೂಹ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com
ಪ್ರಧಾನ ಸಂಪಾದಕರು :- ಸೌ. ಸುಧಾ ಡಿ. ಪಾಟೀಲ, ಉಪನ್ಯಾಸಕರು, ಕನ್ನಡ ವಿಭಾಗ